ದೊಡ್ಡಕೆರೆ ಮತ್ತು ಗೋಪಾಲಪುರ ಕೆರೆಗಳ ಕೆಲಸ ಪೂರೈಸಿದೆಯೇ ?

Sri H. M. CHANNABASAPPA.—At this juncture I would like to pass on an information. A similar question had been tabled by Sri Lingadevaru and I had given an answer with regard to Soralamavu Doddakere. The work of the closing of the breach is complete.

ಶ್ರೀ ಸಿ. ಎಚ್. ಲಿಂಗದೇವರು.—ಸೋರಲಮಾವು ದೊಡ್ಡಕೆರೆ ಪೂರ್ಣವಾಗಿ ಜೀರ್ಣೋದ್ಧಾರವಾಗಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬ್ರೀಚ್ ಮುಚ್ಚಿದೆ, ಇನ್ನೂ ಪೂರ್ಣವಾಗಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—1952ರಿಂದ ಒಂದು ಕೆರೆ ಕೂಡ ಜೀರ್ಣೋದ್ಧಾರವಾಗಿಲ್ಲದಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗಾದರೆ ಕೆರೆಗಳು ಸರಿಯಾದ ಸ್ಥಿತಿಯಲ್ಲಿದ್ದುವೆಂದು ಕಾಣುತ್ತದೆ.

ಶ್ರೀ ಸಿ. ಎಚ್. ಲಿಂಗದೇವರು.—ಬ್ರೀಚ್ ಆಗಿದ್ದರೆ ಮಾತ್ರ ರೆಸ್ಟೋರ್ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೃಪಾಸಿಟಿ, ಅಚ್ಚುಕಟ್ಟು ಹೆಚ್ಚು ಮಾಡುವುದು, ಕೋಡಿ, ಏರಿ ಎತ್ತರಿಸುವುದು ಇತ್ಯಾದಿ ಅನೇಕ ಕೆಲಸಗಳು ಜೀರ್ಣೋದ್ಧಾರ ಎಂಬುದರಲ್ಲಿ ಸೇರಿರುತ್ತವೆ. ಇವುಗಳಲ್ಲಿ ಯಾವುದಾದರೂ ಅವಶ್ಯಕವಾಗಿದ್ದರೆ ರೆಸ್ಟೋರ್ ಮಾಡಲು ಆರ್ಡರು ಮಾಡಬಹುದು.

ಶ್ರೀ ಸಿ. ಎಚ್. ಲಿಂಗದೇವರು.—ಅವಲಗೆರೆ, ಕಾಮಲಾಪುರ, ಮಾದೇಹಳ್ಳಿ ಈ ಮೂರು ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕೆಂದು ಮೂರು ವರ್ಷಗಳಿಂದ ಕೇಳುತ್ತಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜ್ಞಾಪಕವಿಲ್ಲ. ಹಾಗೆ ಕೇಳಿದ್ದರೆ ಮಾಡೋಣ.

ಶ್ರೀ ಸಿ. ಎಚ್. ಲಿಂಗದೇವರು.—ಈ ಮೂರು ಕೆರೆಗಳ ಜೀರ್ಣೋದ್ಧಾರದ ವಿಚಾರ ಬಹಳ ದಿವಸಗಳಿಂದ ಇಂಜನಿಯರಿಂಗ್ ಆಫೀಸಿನಲ್ಲಿ ಪೆಂಡಿಂಗ್‌ನಲ್ಲಿದೆ. ಪರಿಶೀಲಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪರಿಶೀಲಿಸಿ ಅಂದಾಜಾಗದಿದ್ದರೆ ಮಾಡಿಸಿ ಆದಷ್ಟು ಬೇಗ ಮಾಡಲು ಪ್ರಯತ್ನಪಡುತ್ತೇವೆ.

Theppotsava in Tumkur.

Q.—490. Sri T. N. MUDALAGIRI GOWDA (Kunigal).—

Will the Government be pleased to state :—

(*a*) whether Theppotsava (ತೆಪ್ಪೋತ್ಸವ) was arranged in view of the overflow of water (kodi) in Tumkur tank three months ago ;

(*b*) whether a Committee was not set up in respect of the arrangements connected with the Theppotsava (ತೆಪ್ಪೋತ್ಸವ);

(*c*) who are the members and the Chairman of the Committee ;

(*d*) the amount collected ;

(*e*) whether the Chief Minister Sri K. Hanumanthaiya had participated in the Theppotsava function ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) Yes ; a Committee was constituted.

(*c*) A list is appended.

(*d*) Rs. 2,488-10-0.

(*e*) Yes.

Committee constituted in connection with Theppotsavam at Tumkur.

SRI MOHAMED RAHMATHULLA, M.A., LL.B.,
Deputy Commissioner (*Chairman*).

	Members		*Members*
	Sriyuts—		Sriyuts—
1	Sub-Division Officer, Tumkur	15	A. M. Revanna
2	District Treasury Officer	16	Kuntaiah
3	Amildar, Tumkur	17	Rangahanumiah
4	Dr. T. S. Mallikarjunaiah	18	G. Y. Thammiah
5	T. P. Krishnappa, President, Municipal Council.	19	Mariyappa
		20	Madar Sab
6	Siddanarasiah	21	B. V. Shankarappa, Vice-President
7	D. Nanjappa, Municipal Councillor	22	Anantharama Setty
8	T. G. Gangaiah	23	K. Narayana Setty, Tumkur
9	T. N. Hutchappa	24	T. N. Kempahonnaiah, M.L.C.
10	B. C. Nanjundiah, M.L.A.	25	S. V. Achar
11	Anubasaviah	26	Yerrappa
12	Maistry Chikkasiddiah, Municipal Councillor.	27	Yejaman Siddappa
		28	Varadachar
13	A. S. Nandeesh, Municipal Councillor.	29	Assistant Engineer
		30	Yalakkappa
14	T. G. Balappa, News Agent	31	Senior Operator, Power and Light

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ರೀತಿ ಯಾಗಿ ತೆಪ್ಪೋತ್ಸವವನ್ನು ತಾವು ಯಾವ ಯಾವ ಕೆರೆ ಗಳಲ್ಲಿ ನಡೆಸಬೇಕೆಂದು ಏರ್ಪಾಡು ಮಾಡಿದ್ದೀರಿ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಈ ತೆಪ್ಪೋತ್ಸವವನ್ನು ತುಮಕೂರಿನ ಅಮಾನಿ ಕೆರೆಯಲ್ಲಿ ನಡೆಸುವಂತೆ ಅಲ್ಲಿಯ ಜನರು ಏರ್ಪಾಡು ಮಾಡಿಕೊಂಡಿದ್ದರು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸರ್ಕಾರದ ವರೇ ಈ ತೆಪ್ಪೋತ್ಸವ ನಡೆಸಲು ಏರ್ಪಾಡು ಮಾಡಿದ್ದರೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಅಲ್ಲಿಯ ಖಾಸಗೀ ಜನರೂ ಮತ್ತು ಇತರ ಮಹನೀಯರೂ ಸೇರಿ ಅದನ್ನು ಮಾಡಬೇಕೆಂದು ಆಸೆಪಟ್ಟು ಮಾಡಿದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಲ್ಲಿಯ ಡೆಪ್ಯುಟಿ ಕಮಿಷನರು ತಾನೇ ಇದನ್ನೆಲ್ಲಾ ಏರ್ಪಾಡು ಮಾಡಿದ್ದು ?

Sri A. G. RAMACHANDRA RAO.—He was the Chairman of the committee.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸರ್ಕಾರದ ವರು ಆ ಡೆಪ್ಯುಟಿ ಕಮಿಷನರವರಿಗೆ ಆ ಕಾರ್ಯದಲ್ಲಿ ಭಾಗವಹಿಸಲು ಪರ್ಮಿಷ್ ಕೊಟ್ಟಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಅವರು ಅದರಲ್ಲಿ ಭಾಗವಹಿಸಲು ಅವರಿಗೆ ಅಂಥ ಯಾವ ಪ್ರತಿಬಂಧಕವೂ ಇರಲಿಲ್ಲವೆಂದು ಕಾಣುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಾದರೆ ಈ ಡೆಪ್ಯುಟಿ ಕಮಿಷನರುಗಳೂ ಮತ್ತು ಇತರ ಸರ್ಕಾರಿ ಅಧಿಕಾರಿಗಳೂ ಇಂಥ ಖಾಸಗೀ ಸಮಾರಂಭಗಳಲ್ಲಿ ಭಾಗವಹಿಸಬೇಕಾಗಿದ್ದರೆ ಸರ್ಕಾರದ ಪರ್ಮಿಷ್ ತೆಗೆದುಕೊಳ್ಳಬೇಕಾದ್ದಿಲ್ಲವೆಂದು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಇದನ್ನು ಜನರಲೈಜ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ಸಮಿತಿಯನ್ನು ರಚಿಸಿದ್ದು ಯಾವಾಗ ?

ಶ್ರೀ ಎ. ಜಿ. ರಾಮಚಂದ್ರರಾವ್.—ತಾರೀಖು 1ನೇ ನವಂಬರ್ 1955ರಲ್ಲಿ ಅಲ್ಲಿನ ಮಹಾಜನರು ಸೇರಿಕೊಂಡು ಆ ಸಮಿತಿಯನ್ನು ಏರ್ಪಾಡು ಮಾಡಿ, ಆ ಮೂಲಕ ಆ ಸಮಾರಂಭ ಮಾಡಬೇಕೆಂದು ಏರ್ಪಾಡು ಮಾಡಿಕೊಂಡಿದ್ದರು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಸಮಾರಂಭದ ಏರ್ಪಾಡುಗಳು ನಡೆಯಲು ಪ್ರಾರಂಭವಾಗಿ ಎಷ್ಟು ದಿವಸಗಳಾದವು ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ತೆಪ್ಪೋತ್ಸವ ನಡೆದದ್ದು ತಾ॥ 3ನೇ ಡಿಸೆಂಬರ್ 1955 ರಲ್ಲಿ. ಆ ಸಮಿತಿ ನೇಮಕವಾದದ್ದು ತಾ॥ 1ನೇ ನವೆಂಬರ್ 1955 ರಲ್ಲಿ. ಅಲ್ಲಗೆ ಲೆಕ್ಕ ಹಾಕಿಕೊಳ್ಳಿ, ಒಂದು ತಿಂಗಳು ಎರಡು ದಿವಸಗಳವರೆಗೆ ಆ ಏರ್ಪಾಡುಗಳು ನಡೆದಿರುತ್ತವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಂದ ಮೇಲೆ ಅಲ್ಲಗೆ ಒಂದು ತಿಂಗಳು ಎರಡು ದಿವಸಗಳ ತನಕ ಈ ಸಮಿತಿಯಲ್ಲಿರುವ ಡೆಪ್ಯುಟಿ ಕಮಿಷನರೂ, ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರೂ, ಅಮಲ್ದಾರರೂ ಇತ್ಯಾದಿ ಅಧಿಕಾರಿಗಳಿಗೆಲ್ಲಾ ಈ ಕೆಲಸ ವಿನಾ ಬೇರೆ ಕೆಲಸಗಳನ್ನು ಮಾಡಲು ಅವಕಾಶವಿರಲಿಲ್ಲವೆಂದು ಇದರಿಂದ ಅರ್ಥವಾಗುತ್ತದೆಯಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಅರ್ಥ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಕೆಲಸ ವಿನಾ ಮತ್ತೆ ಯಾವ ಕೆಲಸ ಮಾಡುವುದಕ್ಕೂ ಇವರಿಗೆ ಅವಕಾಶವಿರಲಿಲ್ಲವೆಂದರೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಸಮಾರಂಭಕ್ಕೆಷ್ಟು ಖರ್ಚಾಯಿತು ?

ಶ್ರೀ ಎ. ಜಿ. ರಾಮಚಂದ್ರರಾವ್.—ರೂ. 2,482-8-10 ಗಳು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಪೈಕಿ ಸರ್ಕಾರದವರು ಎಷ್ಟು ಕೊಟ್ಟಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾವೇನೂ ಕೊಟ್ಟಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಚಂದಾ ಹಣವನ್ನು ವಸೂಲ್ಮಾಡುವುದಕ್ಕೆ ಅಧಿಕಾರಿಗಳು ಹೋಗಿರಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಆ ಕಾರ್ಯವನ್ನೆಲ್ಲಾ ಆ ಖಾಸಗೀ ಜನರೇ ಮಾಡಿಕೊಂಡಿದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ಸಮಾರಂಭಕ್ಕೆ ಚೀಫ್ ಮಿನಿಸ್ಟರ್ ಅವನ್ನು ಕರೆಸಬೇಕೆಂದು ಆ ಸಮಿತಿ ಒಂದು ನಿರ್ಣಯವನ್ನು ಮಾಡಿತ್ತಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ರೀತಿ ತೀರ್ಮಾನ ಮಾಡುವುದಕ್ಕೆ ಮುಂಚೆ ಆ ಬಗ್ಗೆ ಡೆಪ್ಯುಟಿ ಕಮಿಷನರೇನಾದರೂ ಬಂದು ಮಂತ್ರಿಗಳನ್ನು ಕಂಡು ಕೇಳಿಕೊಂಡು ಹೋಗಿದ್ದರೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಆ ಖಾಸಗೀ ಜನರೇ ಬಂದು ಆ ವಿಚಾರಗಳನ್ನೆಲ್ಲಾ ನಿಶ್ಚಯಿಸಿಕೊಂಡು ಹೋಗಿದ್ದರು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹೀಗೆ ಆ ಸಮಾರಂಭಕ್ಕೆ ಮುಖ್ಯ ಮುಂತ್ರಿಗಳು ಬರುತ್ತಾರೆಂದು ಗೊತ್ತಾದಮೇಲೆ ಆ ಅಧಿಕಾರಿಗಳಿಗೆಲ್ಲಾ ಈ ಸಮಾರಂಭದ ಕಾರ್ಯಗಳಲ್ಲೇ ನಿರತರಾಗಬೇಕಾಗಿ ಬಂದುದರಿಂದ ಇವರು ಬೇರೆ ತಮ್ಮ ನಿತ್ಯದ ಕೆಲಸಗಳಲ್ಲಿ ತೊಡಗಲು ಅವಕಾಶವಿರಲಿಲ್ಲವೆಂಬುದು ಈಗಲಾದರೂ ಅರ್ಥವಾಗುತ್ತದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ತೆಪ್ಪೋತ್ಸವದಲ್ಲಿ ಅಲ್ಲರತಕ್ಕ ದೇವರನ್ನು ತಾನೇ ಕೂಡಿಸಿ ಉತ್ಸವ ಮಾಡಿದ್ದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಕಾಂಗ್ರೆಸ್ ಅಧ್ಯಕ್ಷರು ಬಂದು ಹೋಗಿ ಅಲ್ಲಗೆ 8 ದಿವಸಗಳಾಗಿತ್ತಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಮುಖ್ಯ ಮುಂತ್ರಿಗಳನ್ನು ಕರೆಸಿ ಈ ತೆಪ್ಪೋತ್ಸವ ನಡೆಸಬೇಕೆಂದು ಮಾಡಿದ್ದು ಆ ಅಧಿಕಾರಿಗಳ ಪ್ರಭಾವವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ತಾರೀಖು 1-11-1955 ರಲ್ಲಿ ಒಂದು ಸಮಿತಿ ನೇಮಕವಾಯಿತು. ಆ ಸಮಿತಿಯವರು ಈ ಏರ್ಪಾಡುಗಳನ್ನು ಮಾಡಿದರು.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಮುಖ್ಯಮಂತ್ರಿಗಳು ಈ ತೆಪ್ಪೋತ್ಸವಕ್ಕೆ ಬಂದಿದ್ದಂಥ ಕಾಲದಲ್ಲಿ ಇವ

ರಿಗಾಗಿ ಹೆಚ್ಚು ಪೋಲೀಸಿನವರನ್ನು ವಿಶೇಷ ರಕ್ಷಣೆ ಬಗ್ಗೆ ತೆಗೆದುಕೊಳ್ಳಲಾಗಿದ್ದುದರ ನಂಬಂಧದಲ್ಲಿ ಖರ್ಚಾಗಿರತಕ್ಕ ಮೊಬಲಗೆಷ್ಟು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರು ಸಾಮಾನ್ಯವಾಗಿ ಇತರ ಕಾರ್ಯಕ್ರಮಗಳಿಗೆ ಹೋದಾಗ ಯಾವ ರೀತಿ ರಕ್ಷಣೆ ಒದಗಿಸಲಾಗುತ್ತಿತ್ತೋ ಅಷ್ಟನ್ನೇ ಅಲ್ಲಿಯೂ ಒದಗಿಸಲಾಗಿತ್ತು. ಆ ಬಗ್ಗೆ ಹೆಚ್ಚಿನ ಖರ್ಚುಗಳೇನೂ ಆಗಿಲ್ಲ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಹಾಗಿದ್ದರೆ ಇವರು ಆ ಸಮಾರಂಭಕ್ಕೆ ಬಂದಿದ್ದಂಥ ಕಾಲದಲ್ಲಿ ಇವರ ರಕ್ಷಣೆಗೆ ಬಗ್ಗೆ ವಿಶೇಷ ಪೋಲೀಸ್ ಬಂದೋಬಸ್ತು ಹಾಕಲಾಗಿದ್ದಿತು ಎನ್ನುವ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಆ ಸಮಯದಲ್ಲಿ ಅಲ್ಲಿಗೆ ಸ್ಪೆಷಲ್ ಡ್ಯೂಟಿಯ ಬಗ್ಗೆ 15-20 ಜನ ಪೋಲೀಸ್ ಇನ್‌ಸ್ಪೆಕ್ಟರುಗಳು ಬೇರೆ ಸ್ಥಳಗಳಿಂದ ಬಂದಿರಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈ ನಂಬಂಧದಲ್ಲಿ ಸ್ಪೆಷಲ್ ಪೋಲೀಸಿನವರನ್ನು ತೆಗೆದುಕೊಂಡಿದ್ದರ ಬಗ್ಗೆ ಎಷ್ಟು ಖರ್ಚಾಯಿತು, ಎಷ್ಟು ಜನರನ್ನು ತೆಗೆದುಕೊಳ್ಳಲಾಗಿತ್ತು ಎಂಬ ಬಗ್ಗೆ ಅಂಕಿ ಅಂಶಗಳನ್ನೆಲ್ಲಾ ಈ ಸಭೆಯ ಮುಂದಿಡಲಾಗುತ್ತದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಪೇಕ್ಷೆಪಟ್ಟರೆ ಇಡಲಾಗುವುದು.

ಶ್ರೀ ಜೆ. ಮಹಮ್ಮದ್ ಇಮಾಂ.—ಮಳೆ ಬೆಳೆಗಳು ದೇಶದಲ್ಲಿ ಹೋದಂಥ ಕಾಲದಲ್ಲಿ ಈ ರೀತಿ ತೆಪ್ಪೋತ್ಸವ ಮಾಡುವುದರಿಂದ ಮಳೆ ಬೆಳೆಗಳು ಬಹಳ ಚೆನ್ನಾಗಿ ಆಗುತ್ತವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಜೆ. ಮಹಮ್ಮದ್ ಇಮಾಂ.—ಕೆರೆ ತುಂಬಿದಾಗಲೆಲ್ಲಾ ಅವರು ಈ ಕಾರ್ಯ ನಡೆಸುತ್ತಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಕೆರೆ ತುಂಬುವುದೇ ಬಹಳ ಅಪರೂಪ. ಅನೇಕ ವರ್ಷಗಳಿಗೊಮ್ಮೆ ತುಂಬುತ್ತದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಈ ತೆಪ್ಪೋತ್ಸವದಲ್ಲಿ ಯಾವ ಪಾಲಿಟಿಕ್ಸ್ ಆಗಲಿ ಅಥವಾ ಪೊಲಿಟಿಕಲ್ ಸಿಗ್ನಿಫಿಕೆನ್ಸ್ ಆಗಲಿ ಅಥವಾ ಲೋಕಲ್ ಫ್ಯಾಕ್ಷನ್‌ಗಳಾಗಲಿ ಇವೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಈ ತೆಪ್ಪೋತ್ಸವದಂಥ ಬಹು ಪ್ರಾಮುಖ್ಯವಾದ ಸಮಿತಿಗೆ ಶ್ರೀ ಟಿ. ಎಸ್. ಮೂಡಲಗಿರಿಗೌಡರನ್ನು ಏಕೆ ನಡನ್ಸರ ನ್ನಾಗಿ ಆರಿಸಲಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರು ಮೊದಲನೆಯದಾಗಿ ತುಮಕೂರಿನ ನಿವಾಸಿಗಳಲ್ಲ. ಎರಡನೆಯದಾಗಿ ಆ ಕೆರೆಯ ಅಚ್ಚುಕಟ್ಟುದಾರರೂ ಅಲ್ಲ. ಆದಕ್ಕಾಗಿ ಇವರನ್ನು ಚುನಾಯಿಸತಕ್ಕ ಪ್ರಶ್ನೆ ಏಳುವುದಿಲ್ಲ.

Sri K. PUTTASWAMY.—Who was the deity on the Theppa ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿ ಒಂದು ಅಮ್ಮನ ದೇವಸ್ಥಾನವಿರಬಹುದೆಂದು ಕಾಣುತ್ತದೆ. ಆ ದೇವತೆಯನ್ನೇ ಕೂರಿಸಿರಬೇಕು.

Sri K. PUTTASWAMY.—Is it a fact that Hanumantharaya presided over that function ?

Sri A. G. RAMACHANDRA RAO.—I do not think that is a fact.

Sri K. PUTTASWAMY.—May I know who are all the persons who went on the Theppa ?

Sri A. G. RAMACHANDRA RAO.—We have no details of that.

Sri K. PUTTASWAMY.—May I know whether the Government permitted the other officers to serve as members of this Committee ?

Sri A. G. RAMACHANDRA RAO.—That permission was not necessary.

Sri K. PUTTASWAMY.—Is it not a fact that the previous permission of the Government should be obtained for officers to serve on any committee which engages itself in collecting funds ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಲೇ ಇದಕ್ಕೆ ಉತ್ತರ ಹೇಳಿದ್ದೇನೆ.

Sri K. PUTTASWAMY.—Are the Government certain that no undue influence is brought to bear on the public in the matter of collection of these funds ?

Sri A. G. RAMACHANDRA RAO.—Absolutely no undue influence was brought to bear on the public in collections, nor have any complaints been received.

Sri K. PUTTASWAMY.—May I know what are the factors that the Government are having in view to come to that certainty ?

Sri A. G. RAMACHANDRA RAO.—Absence of complaints.

Sri K. PUTTASWAMY.—Is it not a fact that when local officers take interest, such complaints would not come forth because of the official influence ?

Sri A. G. RAMACHANDRA RAO.—It cannot be generalised like that and as already stated, there has not been any complaint in that behalf.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮಂತ್ರಿಗಳು ಪ್ರವಾಸ ಹೋದಾಗ ಅಲ್ಲ ಅವರಿಗೆ ಪೋಲೀಸ್ ಬಂದೋಬಸ್ತ್ ಹಾಕುವುದು ಮೊದಲಿಂದಲೂ ಇರತಕ್ಕಂಥ ಪದ್ಧತಿಯೋ ಅಥವಾ ಇದು ಈಚೆಗೆ ಹೊಸದಾಗಿ ಏನಾದರೂ ಮಾಡಲ್ಪಟ್ಟಿದ್ದೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲಿಂದಲೂ ಇದು ಇರತಕ್ಕ ಪದ್ಧತಿ.